## ಪದಬಂಧ



**ಎಡದಿಂದ ಬಲಕ್ಕೆ**

1. ಅಭಯಂತರನ್ನು ಸನ್ಮಾನಿಸಲು ಭಾರೀ ವಿರೋಧವೇ? 4
3. ಬೀಸುತ್ತಿರುವ ಗಾಳಿಯೊಡನೆ ಇದೆಂಥ ಸುಗಂಧ? 3
4. ಖಜಾನೆಯನ್ನು ಕಾಯಲು ತಕ್ಕವನನ್ನು ಆಯ್ಕೆ ಮಾಡಲು ಜನ್ಮಕುಂಡಲಿ ಬೇಕೇ? 3
6. ಬಾಲ ಕತ್ತರಿಸಿದೊಡನೆ ಶಕ್ತಿ ರಹಿತ ಆದೀತು 4
7. ಮಹಾನ್ ಕೌಶಲ್ಯವಂತರಾಗಿದ್ದರು ಸೀತೆಯ ಮಕ್ಕಳು 4
9. ಸಹಸ್ರಾರು ಜನರಿಗೆ ಗೊತ್ತಿಲ್ಲ, ಇದು ನಮ್ಮ ಭೂಮಿಯದೇ ಹೆಸರು 4
12. ಅಂಗರಾಗವನ್ನು ಲೇಪಿಸಿ ಬಂದವರನ್ನು ಕಂಡೊಡನೆಯೇ ಉಕ್ಕಿತೇ ಪ್ರೀತಿ? 4
14. ಮುಂದುವರಿಯುವ ಭರದಲ್ಲಿ ಆದರ್ಶಗಳೆಲ್ಲ ಹಿಂದುಮುಂದು 3
15. ಬೇರೇನನ್ನೂ ಎಣಿಸಬೇಡಿ, ಅದು ಒಂದು ಮಳೆ ನಕ್ಷತ್ರದ ಹೆಸರು 3
16. ರಾಮಣ್ಣನಿಗೆ ಇದೀಗ ಸಿಕ್ಕಿದೆ ಸಾಲದಿಂದ ಬಿಡುಗಡೆ 4

**ಮೇಲಿನಿಂದ ಕೆಳಕ್ಕೆ**

1. ಭೂಮಿಯನ್ನು ರಕ್ಷಿಸಲು ನಿಂತ ಯಾರನ್ನು ಕಂಡರೂ ತುಂಬ ಹೆಮ್ಮೆ, ಪ್ರೀತಿ 4
2. ಇಡೀ ರಾಜ್ಯಕ್ಕೇ ಒಮ್ಮೆ ಬಿಡುವಿನ ಸಮಯ ಬಂದಿತ್ತು 4
3. ಆತನ ಸಂಪಾದನೆಯಲ್ಲಿ ಭಾರೀ ಏರಿಕೆಗೆ ಕಾರಣ ಒಳ್ಳೆಯ ಬೆಳೆ 3
5. ಕೊಳಕು ಸೇರಿಲ್ಲವೇ ನೋಡಲು ಚೆನ್ನಾಗಿ ಬೆರೆಸು 3
6. ಬಡಿಗೆ ಹಿಡಿದು ಬಂದವರ ಮುಂದೆ ಬರೀ ಜಂಭದ ಮಾತೇಕೆ? 4
8. ಶೌರ್ಯ ಪ್ರದರ್ಶನಕ್ಕೆ ಓಡಿ ಬಂದವರ ವೇಗ ಬಾಣದಷ್ಟು ಬೇಗ ಆಗಿತ್ತು 4
10. ಸರ್ವರಿಗೂ ಪ್ರಿಯವಾದೀತು ಈ ಹಿತಕರ ರಾಗ 3
11. ಹೋರಾಟ ಮಾಡುವಾಗಲೂ ಹಿಡಿದ ಪಟ್ಟು ಬಿಡದಾಕೆ 4
12. ಅನುರಕ್ತಿಯನ್ನೂ ಮೀರುವಂಥ ವಿಪರೀತ ಪೂಜ್ಯಭಾವ 4
13. ಈ ಗಿರಣಿಯ ಒಡತಿಗೆ ಒಪ್ಪವಾಗುವ ಹೆಸರು 3

---

### 08–08–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಸರ್ಪಸಂಗ 3. ವರಾಹ 4. ದವನ 6. ನೆಲೆಯೂರು 7. ಅಂತಕ 9. ಮುದುಕ 11. ಜಗಳ 13. ಸುಹಾಸ 15. ಸಂಚಕಾರ 17. ಮೆಲ್ಲುಡಿ 18. ಸಲೀಸು 19. ಗೆಳೆತನ

**ಮೇಲಿನಿಂದ ಕೆಳಕ್ಕೆ**

1. ಸಹನೆ 2. ಗದರು 3. ವರ್ಜಿತ 5. ನಗದು 7. ಅಂಬುಜ 8. ಕವಳ 9. ಮುನಿಸು 10. ಕಳಸ 12. ಗರಿಮೆ 14. ಹಾರಿಸು 15. ಸಂಡಿಗೆ 16. ರಸನ

ಪ್ರಶ್ನಾಂಕಣ

# ಚಂದ್ರ: ಏನೇನು ಸಾಧನೆ?

ಚಂದ್ರ ಅದೊಂದು ಪರಮ ವಿಶಿಷ್ಟ ಬಾಹ್ಯಾಕಾಶ ದೂರದರ್ಶಕ. ಅದರ ಪೂರ್ಣ ಹೆಸರು ಚಂದ್ರ ಕ್ಷಕಿರಣ ದೂರದರ್ಶಕ (ಚಿತ್ರ 3). ಯು.ಎಸ್.ಎ. ಯ ನಾಸಾದಿಂದ ನಿರ್ಮಿಸಲ್ಪಟ್ಟು 1999ರ ಜುಲೈ 23ರಂದು ಅಂತರಿಕ್ಷವನ್ನು ತಲುಪಿದ ಚಂದ್ರ ಅತಿ ದೀರ್ಘವೃತ್ತಾಕಾರದ ಪಥದಲ್ಲಿ ಭೂಮಿಯನ್ನು ಪರಿಭ್ರಮಿಸುತ್ತಿದೆ. ಅದರ ಪ್ರಸ್ತುತದ ವಿಶೇಷ ಏನೆಂದರೆ ಕಳೆದ ಜುಲೈ 23ರಂದು ಈ ಅದ್ಭುತ ಸಾಧನ 25 ವರ್ಷಗಳನ್ನು ಪೂರೈಸಿದೆ. ನಾಸಾದ ನಾಲ್ಕು ಮಹಾನ್ ದೂರದರ್ಶಕಗಳ (ದಿ ಗ್ರೇಟ್ ಟೆಲಿಸ್ಕೋಪ್ಸ್) ಗುಂಪಿಗೇ ಸೇರಿರುವ ಚಂದ್ರ (ಈ ಗುಂಪಿನ ಇತರ ಮೂರು ಅಂತರಿಕ್ಷ ದೂರದರ್ಶಕಗಳು: ಹಬಲ್ ದೂರದರ್ಶಕ (ಚಿತ್ರ 1), ಸ್ಪಿಟ್ಜರ್ ದೂರದರ್ಶಕ (ಚಿತ್ರ 2) ಮತ್ತು ದಿ ಕಾಂಪ್ಟನ್ ಗಾಮಾ ರೇ ಅಬ್ಸರ್ವೇಟರಿ; ಆ ಕಾಲದಲ್ಲಿ ಜೇಮ್ಸ್ ವೆಬ್ ದೂರದರ್ಶಕ ಇನ್ನೂ ನಿರ್ಮಾಣಗೊಂಡೇ ಇರಲಿಲ್ಲ) ಈಗಲೂ ಇಡೀ ಜಗತ್ತಿನ ಅತ್ಯದ್ಭುತ, ಅತಿ ಸಮರ್ಥ ಕ್ಷಕಿರಣ ದೂರದರ್ಶಕವಾಗಿದೆ.

ರೇಡಿಯೊ ಅಲೆಗಳಿಂದ ತೊಡಗಿ ಗಾಮಾ ವಿಕಿರಣಗಳ ವರೆಗಿನ ಸಪ್ತವಿಧ ವಿದ್ಯುತ್ಕಾಂತೀಯ ವಿಕಿರಣಗಳಲ್ಲೊಂದಾದ ಎಕ್ಸ್‌ರೇಗಳದು ವಿಪರೀತ ಶಕ್ತಿ. ನಮ್ಮ ದೃಷ್ಟಿಗಾಗಲೀ ಮತ್ತು ಯಾವುದೇ ಚಾಕ್ಷುಷ ಸಾಧನಗಳಿಗಾಗಲೀ ಕ್ಷಕಿರಣಗಳು ಸಂಪೂರ್ಣ ಅಗೋಚರ. ಆದರೆ ಅಂತರಿಕ್ಷದ ಸಕಲ ಕಾಯಗಳು (ಎಂದರೆ ಗ್ರಹ, ನಕ್ಷತ್ರ, ನೀಹಾರಿಕೆ, ಗ್ಯಾಲಕ್ಸಿ... ಇತ್ಯಾದಿ ಜೀವಂತ ಕಾಯಗಳು) ದೃಗ್ಗೋಚರ ಬೆಳಕಿನ ಜೊತೆ ಜೊತೆಗೇ ಕ್ಷ ಕಿರಣಗಳನ್ನೂ ಹೊಮ್ಮಿಸುತ್ತವೆ. ದೃಗ್ಗೋಚರ ಬೆಳಕನ್ನು ಹೊಮ್ಮಿಸದ ಮೃತ ನಕ್ಷತ್ರ ಅವಶೇಷಗಳು, ಕಪ್ಪು ರಂಧ್ರಗಳು ಇತ್ಯಾದಿ ಕಾಯಗಳೂ ಕ್ಷಕಿರಣಗಳನ್ನು ಹೊಮ್ಮಿಸುತ್ತವೆ. ಯಾವುದೇ ಅಂತರಿಕ್ಷ ಕಾಯ ಹೊಮ್ಮಿಸುವ ಕ್ಷಕಿರಣಗಳ ಅಧ್ಯಯನದಿಂದ ಆಯಾ ಕಾಯದ ಬಗೆಗೆ ಹೇರಳ ಮಾಹಿತಿಗಳನ್ನು ಪಡೆಯಬಹುದು. ಯಾವುದೇ ಕಾಯದಿಂದ ಹೊಮ್ಮಿಬರುವ ಕ್ಷಕಿರಣಗಳನ್ನು ಕಾಣುವ ಎಂದರೆ ಗ್ರಹಿಸುವ ಸಾಮರ್ಥ್ಯ ಚಂದ್ರ ದೂರದರ್ಶಕಕ್ಕೆ ಇದೆ. ಅದೇ ಈ ಸಾಧನದ ವೈಶಿಷ್ಟ್ಯ.




ಭೂಮಿಯಿಂದ ಹತ್ತು ಶತಕೋಟಿ ಜ್ಯೋತಿರ್ವರ್ಷಗಳವರೆಗೂ ದೃಷ್ಟಿಯನ್ನು ಹರಿಸಬಲ್ಲ ಚಂದ್ರದಿಂದ ಲಭಿಸಿರುವ ಮಾಹಿತಿಗಳು ಹೇರಳ ಅಜ್ಞಾತ ಅಂತರಿಕ್ಷ ವಿದ್ಯಮಾನಗಳನ್ನು ತೆರೆದಿಟ್ಟಿವೆ. ಅದರಿಂದ ಪ್ರಾಪ್ತವಾಗಿರುವ ಮಾಹಿತಿಗಳ ನೆರವಿನಿಂದ 2500ಕ್ಕೂ ಅಧಿಕ ಸಂಶೋಧನೆಗಳು ಪೂರ್ಣಗೊಂಡಿವೆ; 5000ಕ್ಕೂ ಹೆಚ್ಚು ಖಗೋಳ ವಿಜ್ಞಾನಿಗಳು ತಮ್ಮ ಶೋಧಗಳಿಗೆ ಈ ದೂರದರ್ಶಕವನ್ನೇ ಅವಲಂಬಿಸಿದ್ದಾರೆ; ಚಂದ್ರದ ನೆರವಿನಿಂದ 10,000ಕ್ಕಿಂತ ಹೆಚ್ಚು ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ. ಎಂಥ ಅದ್ಭುತ ಸಾಧನ ಅಲ್ಲವೇ?

■ ಎನ್. ವಾಸುದೇವ್